

ಹೆಣ್ಣಿನ ಜೀವನದ ಮಹತ್ವದ ಘಟ್ಟವಾದ 'ತಾಯ್ತನ', ಆಕೆಯ ಮೈಮನವನ್ನು ಹಣ್ಣು ಮಾಡುವ ಅವಸ್ಥೆಯೂ ಹೌದು. ತಾಯ್ತನ ಸುಂದರ ಅನುಭೂತಿ ಎನ್ನುವುದು ನಿಜವಾದರೂ, ಅಮ್ಮನಾಗುವ ಪ್ರಕ್ರಿಯೆಯಲ್ಲಿ ಹೆಣ್ಣು ಕಳೆದುಕೊಳ್ಳುವ ಹಾಗೂ ಬಿಟ್ಟುಕೊಡಬೇಕಾದ ಹಲವು ಸಂಗತಿಗಳು ಆಕೆಯ ಬದುಕಿನ ದಿಕ್ಕನ್ನೇ ಬದಲಿಸುತ್ತವೆ. ವೃತ್ತಿಪರ ಮಹಿಳೆಯರು ತಾಯ್ತನದ ಹೊಣೆಗಾರಿಕೆಯಿಂದಾಗಿ ಅವಕಾಶಗಳನ್ನು ಬಿಟ್ಟುಕೊಟ್ಟು ಅಲ್ಪತೃಪ್ತರಾಗಬೇಕಾಗುತ್ತದೆ. ತಾಯ್ತನದ ಸಂಕಟ ಸವಾಲುಗಳು, ತವಕ ತಲ್ಲಣಗಳು ಬಹುತೇಕ ಗಂಡಸರಿಗೆ ಅರ್ಥವಾಗುವುದಿಲ್ಲ. ಪುರುಷ ಅಹಂಕಾರದ ಕಣ್ಣಿಗೆ ಹೆಣ್ಣು ಹೆರುವ ಯಂತ್ರವಷ್ಟೇ. ಆಕೆ ಹೆರಬೇಕಾದ ಮಕ್ಕಳ ಸಂಖ್ಯೆಯನ್ನು ನಿರ್ಣಯಿಸುವ ಗಂಡಿನ ಮನಸ್ಥಿತಿ ಮರುಕಕ್ಕೆ ಅರ್ಹವಾದುದು. ಕಾಲ ಬದಲಾದರೂ 'ತಾಯ್ತನ'ದ ಸ್ವರೂಪದಲ್ಲಿ ಹೆಚ್ಚಿನ ಬದಲಾವಣೆಯೇನೂ ಆಗದ ಸ್ಥಿತಿಗತಿಯನ್ನು ವಿಶ್ಲೇಷಿಸುವ ಈ ಬರಹ, ತಾಯ್ತನಕ್ಕಾಗಿ ಹೆಣ್ಣು ತೆರಬೇಕಾದ ಶುಲ್ಕವನ್ನು ಸಹೃದಯರ ಗಮನಕ್ಕೆ ತರುತ್ತಿದೆ ಹಾಗೂ ಕೌಟುಂಬಿಕ ಹೊಣೆಗಾರಿಕೆಯಲ್ಲಿ ಗಂಡಿನ ಸಹಭಾಗಿತ್ವದ ಅಗತ್ಯವನ್ನು ಪ್ರತಿಪಾದಿಸುತ್ತಿದೆ.

■ ಕೋಡಿಬೆಟ್ಟು ರಾಜಲಕ್ಷ್ಮಿ